# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **224** |
| **ಮಾನ್ಯ ಸದಸ್ಯರ ಹೆಸರು** | ಡಾ: ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 28.01.2026 |
| **ಉತ್ತರಿಸುವ ಸಚಿವರು** | ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯಲ್ಲಿ ಪಶುವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಜಿಲ್ಲೆಯಲ್ಲಿ ಮಂಜೂರಾದ ಒಟ್ಟು ಪಶುವೈದ್ಯರ ಹುದ್ದೆಗಳೆಷ್ಟು ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಪಶುವೈದ್ಯರ ಹುದ್ದೆ ಶೇ.100ರಷ್ಟು ಭರ್ತಿಯಾಗಿದ್ದು, ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ವಿವರ ಈ ಕೆಳಕಂಡಂತಿದೆ.<br><br>(see table below)<br><br>ತಾಲ್ಲೂಕುವಾರು ಹುದ್ದೆಗಳ ಮಾಹಿತಿಯನ್ನು **<u>ಅನುಬಂಧದಲ್ಲಿ</u>** ಒದಗಿಸಿದೆ. |
| ಆ | ಕಳೆದ ಎರಡು ವರ್ಷಗಳಲ್ಲಿ ಜಿಲ್ಲೆಯಲ್ಲಿ ಕಾಣಿಸಿಕೊಂಡ 'ಚರ್ಮಗಂಟು ರೋಗ' (Pumpy Skin Disease) ದಿಂದ ಮೃತಪಟ್ಟ ಜಾನುವಾರುಗಳ ಸಂಖ್ಯೆ ಎಷ್ಟು; ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಸರ್ಕಾರ ಘೋಷಿಸಿದ ಪರಿಹಾರ ಹಣವನ್ನು ಎಲ್ಲರಿಗೂ ವಿತರಿಸಲಾಗಿದೆಯೇ; ಬಾಕಿ ಇರುವ ಪ್ರಕರಣಗಳೆಷ್ಟು; | ಬೀದರ್ ಜಿಲ್ಲೆಯಲ್ಲಿ ಚರ್ಮಗಂಟು ರೋಗವು (Pumpy Skin Disease) 2022-23 ನೇ ಸಾಲಿನಲ್ಲಿ ಕಾಣಿಸಿಕೊಂಡು ಈ ರೋಗದಿಂದ ಒಟ್ಟು 109 ಜಾನುವಾರುಗಳು ಮರಣ ಹೊಂದಿದ್ದವು. ಸಂಬಂಧಪಟ್ಟ ಜಾನುವಾರು ಮಾಲಿಕರಿಗೆ ಒಟ್ಟು ರೂ.16.05 ಲಕ್ಷ ಪರಿಹಾರ ನೀಡಲಾಗಿದೆ. ಪರಿಹಾರ ವಿತರಣೆ ಬಾಕಿ ಇರುವುದಿಲ್ಲ.<br><br>2023-24 ನೇ ಸಾಲಿನಿಂದ ಇಲ್ಲಿಯವರೆಗೆ ಚರ್ಮಗಂಟು ರೋಗದಿಂದ ಯಾವುದೇ ಜಾನುವಾರುಗಳು ಮೃತಪಟ್ಟ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಇ | ಬೀದರ್ ಜಿಲ್ಲೆಯ ಗಡಿ ಭಾಗಗಳಲ್ಲಿ ಜಾನುವಾರುಗಳ ಅಕ್ರಮ ಸಾಗಾಣಿಕೆ ಮತ್ತು ಕಳ್ಳಸಾಗಾಣಿಕೆ ತಡೆಯಲು ಇಲಾಖೆ ಕೈಗೊಂಡಿರುವ ಬಿಗಿ ಕ್ರಮಗಳೇನು; ಕಳೆದ ಒಂದು ವರ್ಷದಲ್ಲಿ ದಾಖಲಾದ ಪ್ರಕರಣಗಳೆಷ್ಟು; | ರಾಜ್ಯದಲ್ಲಿ ಗೋಹತ್ಯೆ ಗೋಹಿಂಸೆ ಮತ್ತು ಅಕ್ರಮ ಗೋಸಾಗಾಣಿಕೆಯನ್ನು ತಡೆಯಲು **ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020 ಹಾಗೂ The Karnataka Prevention of Slaughter and Preservation of Cattle (Transport of Cattle) Rules, 2021** ನ್ನು ಜಾರಿಗೊಳಿಸಲಾಗಿದೆ.<br><br>ಸದರಿ ಕಾಯ್ದೆಯಡಿಯಲ್ಲಿ ಜಾನುವಾರುಗಳ ಅಕ್ರಮ ಸಾಗಾಣಿಕೆ ಹಾಗೂ ಕಳ್ಳ ಸಾಗಾಣಿಕೆ ಮಾಡಿದಲ್ಲಿ ಸಾರಿಗೆ/ಪೊಲೀಸ್ ಇಲಾಖಾ ವತಿಯಿಂದ ವಾಹನ |

Table in answer (ಅ):

| ಕ್ರ.ಸಂ | ಹುದ್ದೆಗಳು | ಮಂಜೂರದ ಹುದ್ದೆಗಳು | ಭರ್ತಿ | ಗುತ್ತಿಗೆ/ ಹೊರಗುತ್ತಿಗೆ | ಖಾಲಿ |
|---|---|---|---|---|---|
| 1 | ಪಶುವೈದ್ಯರು | 123 | 115 | 08 | - |
| 2 | ಸಿಬ್ಬಂದಿಗಳು | 386 | 175 | 84 | 127 |
| | **ಒಟ್ಟು** | **509** | **290** | **92** | **127** |

<table>
<tr><td></td><td></td><td>ಮತ್ತು ಜಾನುವಾರುಗಳನ್ನು ಜಪ್ತಿ ಮಾಡಿ ವಶಪಡಿಸಿಕೊಂಡ ಜಾನುವಾರುಗಳನ್ನು ವ್ಯಾಪ್ತಿಪ್ರದೇಶದ ಪಶುವೈದ್ಯರ ಸಹಯೋಗದೊಂದಿಗೆ ಗೋಶಾಲೆಗಳಿಗೆ ಸ್ಥಳಾಂತರಿಸಲಾಗುತ್ತದೆ. ಅಕ್ರಮ ಜಾನುವಾರುಗಳ ಸಾಗಾಣಿಕೆಗೆ ಬಳಸಿದ ವಾಹನವನ್ನುವಶಪಡಿಸಿಕೊಂಡು ಕಾನೂನು ರೀತಿಯಲ್ಲಿ ಸಾರಿಗೆ/ಪೊಲೀಸ್ ಇಲಾಖಾ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಕಳೆದ ಒಂದು ವರ್ಷದಲ್ಲಿಅಕ್ರಮ ಜಾನುವಾರುಗಳ ಸಾಗಾಣಿಕೆ ಕುರಿತು 3 ಪ್ರಕರಣಗಳು ದಾಖಲಾಗಿರುತ್ತವೆ.</td></tr>
<tr><td>ಈ</td><td>ಜಿಲ್ಲೆಯ ಬಹುತೇಕ ಪಶು ಆಸ್ಪತ್ರೆಗಳು ಸ್ವಂತ ಕಟ್ಟಡವಿಲ್ಲದೆ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಆಸ್ಪತ್ರೆಗಳ ನವೀಕರಣಕ್ಕೆ ಹಾಗೂ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿದ ಅನುದಾನವೆಷ್ಟು:</td><td>ಬೀದರ್ ಜಿಲ್ಲೆಯಲ್ಲಿ ಸ್ವಂತ ಕಟ್ಟಡವಿಲ್ಲದ-05 ಪಶು ಆಸ್ಪತ್ರೆಗಳು/ ಸಂಸ್ಥೆಗಳಿದ್ದು, ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ಸ್ವಂತ ಕಟ್ಟಡವಿಲ್ಲದಿರುವ ಪಶುವೈದ್ಯ ಸಂಸ್ಥೆಗಳು</th></tr>
<tr><td>1</td><td>ಪಶುಚಿಕಿತ್ಸಾಲಯ, ಕೌಟಾ (ಬಿ),</td></tr>
<tr><td>2</td><td>ಪಶುಚಿಕಿತ್ಸಾಲಯ, ದಾಬಕಾ</td></tr>
<tr><td>3</td><td>ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಲಂಜವಾಡ</td></tr>
<tr><td>4</td><td>ಪಶುಚಿಕಿತ್ಸಾಲಯ, ಹೊಳಸಮುದ್ರ</td></tr>
<tr><td>5</td><td>ಪಶುಚಿಕಿತ್ಸಾಲಯ,ಗೋರ್ಟಾ(ಬಿ)</td></tr>
</table>
ಪಶುಚಿಕಿತ್ಸಾಲಯ, ಗೋರ್ಟಾ(ಬಿ)ಗೆ 2025-26ನೇ ಸಾಲಿನಲ್ಲಿ ಆರ್‌ಐಡಿಎಫ್ ಟ್ರಾಂಚ್-31ರಲ್ಲಿ ರೂ:50.00 ಲಕ್ಷ ಅನುದಾನದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ಕ್ರಮವಹಿಸಲಾಗಿದೆ. ಉಳಿದ 4 ಸಂಸ್ಥೆಗಳಿಗೆ ನೂತನ ಕಟ್ಟಡ ನಿರ್ಮಾಣ ಸಂಬಂಧ ಪರಿಶೀಲಿಸಲಾಗುವುದು.<br><br>ಶಿಥಿಲಾವಸ್ಥೆಯಲ್ಲಿರುವ 14 ಪಶು ಆಸ್ಪತ್ರೆಗಳು/ ಸಂಸ್ಥೆ ಕಟ್ಟಡಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ಶಿಥಿಲಾವಸ್ಥೆಯಲ್ಲಿರುವ ಪಶುವೈದ್ಯ ಸಂಸ್ಥೆಗಳ ಹೆಸರು</th><th>ನೂತನ ಕಟ್ಟಡ ನಿರ್ಮಾಣಕ್ಕೆ ಕಾಯ್ದಿರಿಸಿದ ಅನುದಾನ (ಲಕ್ಷಗಳಲ್ಲಿ)</th></tr>
<tr><td>1</td><td>ಪಶುಚಿಕಿತ್ಸಾಲಯ,. ಚಿಟಗುಪ್ಪ</td><td>50.00(ಟ್ರಾಂಚ್ -28)</td></tr>
<tr><td>2</td><td>ಪಶುಆಸ್ಪತ್ರೆ.ಕಮಲನಗರ</td><td>50.00(ಟ್ರಾಂಚ್ -28)</td></tr>
<tr><td>3</td><td>ಪಶುಆಸ್ಪತ್ರೆ.ಹುಲಸೂರ</td><td>50.00(ಟ್ರಾಂಚ್ -28)</td></tr>
<tr><td>4</td><td>ಪಶುಚಿಕಿತ್ಸಾಲಯ,ವಡಗಾಂವ್</td><td>50.00(ಟ್ರಾಂಚ್ -28)</td></tr>
<tr><td>5</td><td>ಪಶುಆಸ್ಪತ್ರೆ. ಬಗದಲ</td><td>50.00(ಟ್ರಾಂಚ್-30)</td></tr>
<tr><td>6</td><td>ಪಶುಆಸ್ಪತ್ರೆ. ಹುಡಗಿ</td><td>50.00 (ಟ್ರಾಂಚ್-30)</td></tr>
<tr><td>7</td><td>ಪಶುಚಿಕಿತ್ಸಾಲಯ,ಮರಖಲ</td><td>50.00(ಟ್ರಾಂಚ್-30)</td></tr>
<tr><td>8</td><td>ಪಶುಆಸ್ಪತ್ರೆ.ಸಾಯಗಾಂವ್</td><td>50.00(ಟ್ರಾಂಚ್-30)</td></tr>
<tr><td>9</td><td>ಪಶುಚಿಕಿತ್ಸಾಲಯ,ಕಣಜಿ</td><td>50.00(ಟ್ರಾಂಚ್-30)</td></tr>
<tr><td>10</td><td>ಪಶುಆಸ್ಪತ್ರೆ.ನಿಟ್ಟೂರ</td><td>50.00(ಟ್ರಾಂಚ್-30)</td></tr>
<tr><td>11</td><td>ಪಶುಚಿಕಿತ್ಸಾಲಯ,ಚಿಂತಾಕಿ</td><td>50.00(ಟ್ರಾಂಚ್-30)</td></tr>
<tr><td>12</td><td>ಪಶುಚಿಕಿತ್ಸಾಲಯ, ಕಮಠಾಣ</td><td>50.00(ಟ್ರಾಂಚ್-31)</td></tr>
<tr><td>13</td><td>ಪಶುಚಿಕಿತ್ಸಾಲಯ, ಲಖನಗಾಂವ್</td><td rowspan="2">ನೂತನ ಕಟ್ಟಡ ನಿರ್ಮಾಣ ಸಂಬಂಧ ಪರಿಶೀಲಿಸಲಾಗುವುದು.</td></tr>
<tr><td>14</td><td>ಪಶುಚಿಕಿತ್ಸಾಲಯ, ಬ್ಯಾಲಹಳ್ಳಿ</td></tr>
</table>
</td></tr>
</table>

| | | |
|---|---|---|
| ಉ | ಬೇಸಿಗೆಯ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಮೇವಿನ ಕೊರತೆ ಉಂಟಾಗದಂತೆ ತಡೆಯಲು ಸರ್ಕಾರ ರೂಪಿಸಿರುವ ಮುನ್ನೇಚ್ಚರಿಕೆ ಕ್ರಮಗಳೇನು: ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | **ಬೀದರ್ ಜಿಲ್ಲೆಯ ಜಾನುವಾರುಗಳಿಗೆ ಬೇಸಿಗೆಯಲ್ಲಿ ಉಂಟಾಗುವ ಮೇವಿನ ಕೊರತೆಯನ್ನು ನೀಗಿಸಲು ಸರ್ಕಾರ ತೆಗೆದುಕೊಳ್ಳುವ ಮುನ್ನೆಚ್ಚರಿಕೆ ಕ್ರಮಗಳು:**<br><br>➢ ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತೆಯಾಗಿ ಮೇವು ಉತ್ಪಾದನೆಯನ್ನು ಹೆಚ್ಚಿಸಲು ನೀರಾವರಿ ಸೌಲಭ್ಯವಿರುವ ರೈತರಿಗೆ ಮೇವಿನ ಬೀಜದ ಮಿನಿಕಿಟ್‌ಗಳನ್ನು ನೀಡಲಾಗುತ್ತದೆ.<br><br>➢ ರೈತರು ಬೆಳೆಯುವ ಮೇವು ಪೋಲಾಗದಂತೆ ಸದ್ಬಳಕೆ ಮಾಡಿಕೊಳ್ಳಲು ರೈತರಿಗೆ ಮೇವು ಕತ್ತರಿಸುವ ಯಂತ್ರವನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತದೆ.<br><br>➢ ಕಡಿಮೆ ದರ್ಜೆಯ ಮೇವಿಗೆ ಯೂರಿಯ ದ್ರಾವಣವನ್ನು ಸಿಂಪಡಿಸಿ ಒಣ ಮೇವು ಪೌಷ್ಠೀಕರಣಗೊಳಿಸುವ ಕುರಿತು ಹಾಗೂ ಹಸಿರು ಮೇವಿನಿಂದ ರಸಮೇವು ತಯಾರಿಸಿ ಸಂರಕ್ಷಿಸಿ, ಬೇಸಿಗೆಯಲ್ಲಿ ಬಳಸಲು ರೈತರಿಗೆ ತರಬೇತಿ ಮತ್ತು ಪ್ರಾತ್ಯಕ್ಷಿಕೆ ನೀಡಲಾಗುತ್ತದೆ.<br><br>➢ ತೋಟಗಾರಿಕೆ ಬೆಳೆಗಳ ಮಧ್ಯ ಖಾಲಿ ಇರುವ ಪ್ರದೇಶಗಳಲ್ಲಿ ಮೇವು ಬೆಳೆಯುವ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲು ರೈತರಿಗೆ ಸೂಕ್ತಮಾರ್ಗದರ್ಶನ ನೀಡಲಾಗುತ್ತದೆ.<br><br>➢ ಸಾಪ್ತಾಹಿಕ ಮೇವಿನ ವರದಿಯನ್ವಯ ಯಾವುದೇ ತಾಲ್ಲೂಕಿನಲ್ಲಿ ಮೇವಿನ ಲಭ್ಯತೆಯು 4 ವಾರಗಳಿಗಿಂತ ಕಡಿಮೆ ಅದಲ್ಲಿ ಮೇವಿನ ಬ್ಯಾಂಕ್‌ನ್ನು ತೆರೆದು ರೈತರಿಗೆ ರಿಯಾಯಿತಿ ದರದಲ್ಲಿ ಒಣ ಮೇವನ್ನು ಪೂರೈಸಲು ಜಿಲ್ಲಾಡಳಿತದಿಂದ ಕ್ರಮವಹಿಸಲಾಗುತ್ತದೆ.<br><br>ಸಾಪ್ತಾಹಿಕ ಮೇವಿನ ವರದಿಯನ್ವಯ ಯಾವುದೇ ತಾಲ್ಲೂಕಿನಲ್ಲಿ ಮೇವಿನ ಲಭ್ಯತೆಯು 2 ವಾರಗಳಿಗಿಂತ ಕಡಿಮೆ ಅದಲ್ಲಿ ಜಿಲ್ಲಾಡಳಿತವು ಹೋಬಳಿ ಮಟ್ಟದಲ್ಲಿ ಜಾನುವಾರು ಶಿಬಿರವನ್ನು ತೆರೆದು ಜಾನುವಾರುಗಳಿಗೆ ಮೇವು, ನೀರು, ನೆರಳನ್ನು ಒದಗಿಸಿ ಸಂರಕ್ಷಿಸಲಾಗುವುದು. |

**(ಸಂಖ್ಯೆ: AHF/12/AID/2026)**

(ಕೆ.ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ
ಸಚಿವರು.

ಅನುಬಂಧ

ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಎಂ. ಜಿ ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು) ರವರು ಕೋರಿರುವ

ಬೀದರ್ ಜಿಲ್ಲೆಯ ಮಾಹಿತಿ

| ಕ್ರ. ಸಂ | ತಾಲ್ಲೂಕು | ಪಶುವೈದ್ಯರು | | | | ಇತರೆ ಸಿಬ್ಬಂದಿಗಳು | | | | ಒಟ್ಟು | | | |
|---|---|---|---|---|---|---|---|---|---|---|---|---|---|
| | | ಮಂಜೂರು | ಭರ್ತಿ | ಗುತ್ತಿಗೆ | ಖಾಲಿ | ಮಂಜೂರು | ಭರ್ತಿ | ಹೊರಗುತ್ತಿಗೆ | ಖಾಲಿ | ಮಂಜೂರು | ಭರ್ತಿ | ಗುತ್ತಿಗೆ / ಹೊರ ಗುತ್ತಿಗೆ | ಖಾಲಿ |
| 1 | ಬೀದರ್ | 29 | 29 | 0 | 0 | 84 | 40 | 19 | 25 | **113** | **69** | **19** | **25** |
| 2 | ಬಾಲ್ಕಿ | 25 | 23 | 2 | 0 | 86 | 43 | 19 | 24 | **111** | **66** | **21** | **24** |
| 3 | ಹುಮನಾ ಬಾದ್ | 15 | 14 | 1 | 0 | 37 | 20 | 1 | 16 | **53** | **34** | **2** | **16** |
| 4 | ಚಿಟಗುಪ್ಪ | 12 | 11 | 1 | 0 | 47 | 24 | 5 | 18 | **58** | **35** | **6** | **18** |
| 5 | ಔರಾದ | 14 | 14 | 0 | 0 | 53 | 20 | 16 | 17 | **67** | **34** | **16** | **17** |
| 6 | ಕಮಲಾನಗರ | 8 | 6 | 2 | 0 | 28 | 9 | 16 | 3 | **36** | **15** | **18** | **3** |
| 7 | ಬಸವಕಲ್ಯಾಣ | 16 | 14 | 2 | 0 | 35 | 14 | 6 | 15 | **51** | **28** | **8** | **15** |
| 8 | ಹುಲಸೂರ | 4 | 4 | 0 | 0 | 16 | 5 | 2 | 9 | **20** | **9** | **2** | **9** |
| **ಒಟ್ಟು** | | **123** | **115** | **8** | **0** | **386** | **175** | **84** | **127** | **509** | **290** | **92** | **127** |

ಜಿಲ್ಲೆಯಲ್ಲಿ ಮಂಜೂರು ಹುದ್ದೆ ಒಟ್ಟು : **509**

ಭರ್ತಿಯಾದ ಹುದ್ದೆ ಒಟ್ಟು : **290**

ಗುತ್ತಿಗೆ / ಹೊರ ಗುತ್ತಿಗೆ ಭರ್ತಿ ಹುದ್ದೆ ಒಟ್ಟು : **92**

ಖಾಲಿ ಹುದ್ದೆಒಟ್ಟು : **127**